ಓ.ಎಸ್. ನಂಃ 806/2023
ಪಿ.ಡಬ್ಲ್ಯೂ-1 (ಸತ್ಯವ್ವ )

ದಿನಾಂಕ: 24-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಶ್ರೀ. ಎಮ್ ಡಿ ಪಿ  ಪ್ರತಿವಾದಿ 1ರವರ ಪರ ವಕೀಲರಿಂದಃ</u>**

ನಾನು ವಿದ್ಯಾಭ್ಯಾಸ ಮಾಡಿಲ್ಲ. ನನ್ನ ಹುಟ್ಟಿ ಊರು ಧಾರವಾಡ ತಾಲೂಕಿನ ನರೇಂದ್ರ ಗ್ರಾಮ ಎಂದರೆ ಸರಿ. ನನ್ನ ಆಧಾರ ಕಾರ್ಡ್ , ಮತದಾರರ ಗುರುತಿನ ಚೀಟಿ, ಪಡಿತರ ಚೀಟಿ ಹಾಗೂ ನನ್ನ ಶಾಲಾ ಪ್ರಮಾಣ ಪತ್ರಗಳು ನರೇಂದ್ರ ಗ್ರಾಮದ ವಿಳಾಸದಲ್ಲಿವೆ ಎಂದರೆ ಸರಿ. 1ನೇ ಪ್ರತಿವಾದ ತಮ್ಮ ಲಿಖಿತ ಹೇಳಿಕೆಯಲ್ಲಿ ಹೇಳಿದ ವಿಷಯನ್ನು ನಾನು ತಿಳಿದುಕೊಂಡಿಲ್ಲ. ಈ ದಾವೆಗೆ ಮತ್ತು ನನ್ನ ಮುಖ್ಯ ವಿಚಾರಣೆ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ.

ಮೂಲ ಪುರುಷ ಗುರುಪಾದಪ್ಪ ಇವರಿಗೆ ನಿಂಗಪ್ಪ, ಯಲ್ಲಪ್ಪ ಹಾಗೂ ಸತ್ಯಪ್ಪಾ ಇವರನ್ನು ಹೊರತುಪಡಿಸಿ ತಂಗೆವ್ವ ಎಂದು ಒಬ್ಬಳು ಹೆಣ್ಣು ಮಗಳು ಇದ್ದರು ಎಂದರೆ ಸರಿಯಲ್ಲ. ಸದರಿ ತಂಗೆವ್ವ ಇವರು ಈಗ ಮೃತ ಪಟ್ಟಿದ್ದು ಸದರಿಯವರಿಗೆ ಮಹಾಂತೇಶ, ನೀಲವ್ವ, ಸುಭಾಷ, ಸಾಂವಕ್ಕ, ಸತ್ಯಪ್ಪಾ , ಯಲ್ಲವ್ವ ಹಾಗೂ ಗಂಗವ್ವ ಎಂದು ಮಕ್ಕಳಿದ್ದಾರೆ ಎಂದರೆ ನನಗೆ ಗೊತಿಲ್ಲ.

ಮೂಲ ಪುರುಷ ಗುರುಪಾದಪ್ಪ ರವರ ಮಗ ನಿಂಗಪ್ಪನಿಗೆ ಸತ್ಯವ್ವ ಹಾಗೂ ನಿಂಗವ್ವ ಎಂದು ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಎಂದರೆ ಸರಿ . ಸದರಿ ಸತ್ಯ ಮತ್ತು ನಿಂಗವ್ವ ಇವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಹಾಗೂ ಅವರನ್ನು ಸೇರಿಸಲು ಯಾವುದೇ ಅಡಚಣೆಗಳಿಲ್ಲ.

1ನೇ ಪ್ರತಿವಾದಿ ಲಕ್ಷ್ಮಿ ಇವರಿಗೆ ಸುಧಾ, ಸುರೇಖಾ ಹಾಗೂ ಶಶಿಕಲಾ ಎಂದು ಹೆಣ್ಣು ಮಕ್ಕಳಿದ್ದಾರೆ ಹಾಗೂ ಗುರುಪಾದನಿಗೆ ಒಬ್ಬ ಗಂಡು ಮಗನಿದ್ದಾನೆ ಎಂದರೆ ಸರಿ. ಸದರಿಯವರನ್ನು ಈ ದಾವೆಯಲ್ಲಿ ಸೇರಿಸಲು ನನಗೆ ಯಾವುದದೇ ಅಡಚಣೆ ಇಲ್ಲ. ಮೃತ ಯಲ್ಲಪ್ಪ ಮತ್ತು 1 ನೇ ಪ್ರತಿವಾದಿಯ ವೈವಾಹಿಕ ಜೀವನದಿಂದ ಸುಧಾ, ಸುರೇಖಾ ಹಾಗೂ ಶಶಿಕಲಾ ಮತ್ತು ಗುರುಪಾದ ಎಂದು ಮಕ್ಕಳು ಹುಟ್ಟಿರುತ್ತಾರೆ ಎಂದರೆ ಸರಿ .

ನನಗೂ ಮತ್ತು ಮೃತ ಯಲ್ಲಪ್ಪ ರವರಿಗು ಮದುವೆ ಆಗಿದೆ ಎಂದು ತೋರಿಸಲು ಹಾಜರು ಪಡಿಸಿದ್ದೇನೆ. ಮುಂದುವರೆದು ಸಾಕ್ಷಿದಾರರು ತಮಗೂ ಮತ್ತು ಮೃತ ಯಲ್ಲಪ್ಪ ರವರಿಗು ಮದುವೆ ಆಗಿದೆ ಎಂದು ತೋರಿಸಲು ಯಾವುದೇ ಕಾಗದ ಪತ್ರ ಇರುವುದಿಲ್ಲ ಎಂದು ಹೇಳುತ್ತಾರೆ. ನನಗೂ ಮೃತ ಯಲ್ಲಪ್ಪ ಇವರಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ನಾನು ಮೃತ ಯಲ್ಲಪ್ಪ ಇವರ ಹೆಂಡತಿ ಇದ್ದು ನನಗೂ ದಾವಾ ಆಸ್ತಿಗಳಲ್ಲಿ ಪಾಲು ಬೇಕು ಎಂದು ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ